**ಡಿ ಡಬ್ಲ್ಯೂಃ 1**

ದಿನಾಂಕ 20-06-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ವಿ ಸಿ ವಕೀಲರಿಂದಃ-**

ಈ ದಾವೆಯನ್ನು ಯಾರು ಹೂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತೇನೆ. ಅವರ ಹೆಸರು ಶೋಭಾ. ಆಸ್ತಿ ವಿಚಾರವಾಗಿ ದಾವೆ ಹೂಡಿರುತ್ತಾರೆ. ವಾದಿಯು ದಿಃ 22-04-2000 ರಲ್ಲಿ ಗುಡ್ಡಪ್ಪ ಕಾಳಿ ಅವರೊಂದಿಗೆ ನೊಂದಾಯಿತ ವಿವಾಹ ಆಗಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ವಾದಿಯು ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಎಸ್ ಎಸ್ ಎಲ್ ಸಿ ವ್ಯಾಸಾಂಗ ಮಾಡಿರುತ್ತೇನೆ. ಗುಡ್ಡಪ್ಪ ಕಾಳಿರವರು ಎಂ ಎಸ್ ರಾಮಯ್ಯ ಆಸ್ಪತ್ರೆಯಲ್ಲಿ ದಿಃ 09-10-2006 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ವಿವಾಹ ನೊಂದಣಿ ಆದ ದಿನಾಂಕದಿಂದ ಗುಡ್ಡಪ್ಪ ಕಾಳಿ ಸಾಯುವವರೆಗೂ ವಾದಿಯೊಂದಿಗೆ ರಾಣೇಬೆನ್ನೂರು ತಾಲೂಕಿನ ಹರಗೊಪ್ಪದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನನ್ನ ಗಂಡ ಗುಡ್ಡಪ್ಪ ಕಾಳಿರವರು ನನ್ನೊಂದಿಗೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನಲ್ಲಿ ವಾಸವಾಗಿದ್ದರು. ಗುಡ್ಡಪ್ಪ ಕಾಳಿರವರು ಬೇಲೂರಿನ ಕನ್ನಡ ಶಾಲೆಯಲ್ಲಿ ಶಿಕ್ಷಕರಾಗಿದ್ದರು ಎಂದರೆ ಸರಿಯಲ್ಲ. ಅವರು ಸೀಡ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

2. ವಾದಿ ಹಾಗೂ ಅವರ ಗಂಡ ಗುಡ್ಡಪ್ಪ ಕಾಳಿರವರ ಮನೆತನದ ಮೂಲ ಪುರುಷ ಹಾಲಪ್ಪ ಕಾಳಿ ಎಂದರೆ ಗುಡ್ಡಪ್ಪ ಕಾಳಿರವರ ತಂದೆ ಹಾಲಪ್ಪ ಕಾಳಿ ಆಗಿದ್ದು, ಅವರು ನನ್ನ ಮಾವ ಆಗಿರುತ್ತಾರೆ. ಹಾಲಪ್ಪ ಕಾಳಿರವರ ಹೆಂಡತಿ ಹೆಸರು ಗೌರಮ್ಮ ಎಂದರೆ ಸರಿ . ಅವರು ನನ್ನ ಅತ್ತೆ. ಅವರಿಗೆ ಕರಬಸಪ್ಪ, ನೀಲಪ್ಪ ಮತ್ತು ಗುಡ್ಡಪ್ಪ ಮೂರು ಜನ ಮಕ್ಕಳು ಎಂದರೆ ನಾಲ್ಕು ಜನ ಹೆಣ್ಣು ಮಕ್ಕಳು, ಮೂರು ಜನ ಗಂಡು ಮಕ್ಕಳು. 1)ಹಿರಿಯಮ್ಮ 2) ಶೇಖಮ್ಮ 3) ಮಾಳಕ್ಕ 4)ಚೌಡಮ್ಮ ಆಗಿರುತ್ತಾರೆ. ಹಿರಿಯಮ್ಮನ ಗಂಡ ಮೃತ ಪಟ್ಟಿದ್ದು ಅವರ ಹೆಸರು ನನಗೆ ನೆನಪಿಲ್ಲ. ಅವರ ಕುಟುಂಬದ ಹೆಸರು ಚಲವಾದಿ ಆಗಿರುತ್ತದೆ. ಶೇಖಮ್ಮ ರವರ ಗಂಡನ ಹೆಸರು ಆಂಜನೆಪ್ಪ ದೊಡ್ಡಮನಿ ಆಗಿರುತ್ತದೆ. ಮಾಳಕ್ಕ ರವರ ಗಂಡನ ಹೆಸರು ನನಗೆ ನೆನಪಿಲ್ಲ. ಅವರ ಕುಟುಂಬದ ಹೆಸರು ಚಲವಾದಿ ಆಗಿರುತ್ತದೆ. ಅವರು ಅಂತರವಳ್ಳಿಯಲ್ಲಿ ವಾಸವಾಗಿರುತ್ತಾರೆ. ಚೌಡಮ್ಮನ ಗಂಡನ ಹೆಸರು ನಾಗರಾಜ ಚಲಾವಾದಿ ಆಗಿದ್ದು, ಅವರು ಬೇಲೂರಿನಲ್ಲಿ ವಾಸವಾಗಿರುತ್ತಾರೆ.

**ಡಿ ಡಬ್ಲ್ಯೂ: 1**

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.